# ಸಾರ್ವಜನಿಕ ವಲಯದ ಕಬ್ಬಿಣ ಮತ್ತು ಉಕ್ಕು ಕಂಪನಿಗಳ (ಪುನರ್ ರಚನೆ) ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1978

9.5.2003 ರಂದು ಜಾರಿಯಲ್ಲಿದ್ದಂತೆ ಸಾರ್ವಜನಿಕ ವಲಯದ ಕಬ್ಬಿಣ ಮತ್ತು ಉಕ್ಕು ಕಂಪನಿಗಳ (ಪುನರ್ ರಚನೆ) ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1978ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ. ಮತ್ತು ಇದನ್ನು 9.5.2003ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 24ನೇ ಸಂಪುಟದ, 1ನೇ ಸಂಚಿಕೆಯಲ್ಲಿ 37 ರಿಂದ 45 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಸಾರ್ವಜನಿಕ ವಲಯದ ಕಬ್ಬಿಣ ಮತ್ತು ಉಕ್ಕು ಕಂಪನಿಗಳ ಕಾರ್ಯ ನಿರ್ವಹಣೆಯಲ್ಲಿ ಉತ್ತಮ ವ್ಯವಸ್ಥೆಯನ್ನು ಮತ್ತು ಇನ್ನೂ ಹೆಚ್ಚಿನ ದಕ್ಷತೆಯನ್ನು ಸುನಿಶ್ಚಿತಗೊಳಿಸುವ ದೃಷ್ಟಿಯಿಂದ ಅವುಗಳನ್ನು ಪುನರ್‌ರಚಿಸುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೊಂಬತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

## ಅಧ್ಯಾಯ - i

### ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಸಾರ್ವಜನಿಕ ವಲಯದ ಕಬ್ಬಿಣ ಮತ್ತು ಉಕ್ಕು ಕಂಪನಿಗಳ (ಪುನರ್ ರಚನೆ) ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1978 ಎಂದು ಕರೆಯತಕ್ಕುದು.

(2) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕುದು.

2. **ಪರಿಭಾಷೆಗಳು:-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು -

(ಎ) "ಗೊತ್ತುಪಡಿಸಲಾದ ದಿನ" ಎಂದರೆ ಈ ಅಧಿನಿಯಮವು ಜಾರಿಗೆ ಬರುವ ದಿನಾಂಕ;

(ಬಿ) "ಕಂಪನಿಗಳ ಅಧಿನಿಯಮ" ಎಂದರೆ ಕಂಪನಿಗಳ ಅಧಿನಿಯಮ, 1956 (1956ರ 1);

(ಸಿ) "ಸಂವಾದಿ ಘಟಕ" ಎಂದರೆ -

(i) ಇಂಟೆಗ್ರಲ್ ಕಂಪನಿಗೆ ಸಂಬಂಧಿಸಿದಂತೆ, ಇಂಟೆಗ್ರೆಲ್ ಕಂಪನಿಯ ಯಾವ ಘಟಕವು, ವಿಸರ್ಜಿತ ಕಂಪನಿಯ ಅಥವಾ ವರ್ಗಾಯಿತ ಕಂಪನಿಯ ಯಾವ ಘಟಕದಲ್ಲಿ, ಸಂಬಂಧಪಟ್ಟ ಅಧಿಕಾರಿಯು ಅಥವಾ ಇತರೆ ನೌಕರನು ಸದರಿ ಘಟಕದ ವರ್ಗಾವಣೆಗೆ ಮುಂಚೆ ಪದಧಾರಣ ಮಾಡಿದ್ದನೋ ಆ ಘಟಕಕ್ಕೆ ಸಂವಾದಿಯಾಗಿರುವ ಘಟಕ;

(ii) ವರ್ಗಾವಣೆ ಪಡೆದ ಕಂಪನಿಗೆ ಸಂಬಂಧಿಸಿದಂತೆ, ವರ್ಗಾವಣೆ ಪಡೆದ ಕಂಪನಿಯ ಯಾವ ಘಟಕವು, ವಿಸರ್ಜಿತ ಕಂಪನಿಯ ಯಾವ ಘಟಕದಲ್ಲಿ ಸಂಬಂಧಪಟ್ಟ ಅಧಿಕಾರಿಯು ಅಥವಾ ಇತರೆ ನೌಕರನು ಸದರಿ ಘಟಕದ ವರ್ಗಾವಣೆಗೆ ಮುಂಚೆ ಪದಧಾರಣ ಮಾಡಿದ್ದನೋ ಆ ಘಟಕಕ್ಕೆ ಸಂವಾದಿಯಾಗಿರುವ ಘಟಕ;

(ಡಿ) "ವಿಸರ್ಜಿತ ಕಂಪನಿ" ಎಂದರೆ ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಒಂದು ಕಂಪನಿ;

(ಇ) "ಇಂಟೆಗ್ರಲ್ ಕಂಪನಿ" ಎಂದರೆ ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ ಮತ್ತು ನವ ದೆಹಲಿಯಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್;

(ಎಫ್)"ವರ್ಗಾವಣೆ ಧಾರಕ ಕಂಪನಿ" ಎಂದರೆ, ಸಂದರ್ಭಾನುಸಾರ, ಒಂದು ವಿಸರ್ಜಿತ ಕಂಪನಿಯ ಅಥವಾ ಒಂದು ವರ್ಗಾಯಿತ ಘಟಕದ ಉದ್ಯಮಗಳನ್ನು ಯಾವ ಕಂಪನಿಗೆ ಈ ಅಧಿನಿಯಮದ ಉಪಬಂಧಗಳ ಕಾರಣದಿಂದಾಗಿ ವರ್ಗಾವಣೆ ಮಾಡಲಾಗಿದೆಯೋ ಆ ಕಂಪನಿ;

(ಜಿ) "ವರ್ಗಾಯಿತ ಕಂಪನಿ" ಎಂದರೆ -

(i) ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ ಮತ್ತು ಬಿಹಾರ ರಾಜ್ಯದ ರಾಂಚಿಯಲ್ಲಿ ತನ್ನ ನೋಂದಾಯಿತ ಕಚೇರಿ ಹೊಂದಿರುವ ಒಂದು ಕಂಪನಿಯಾದ ಮೆಟಲರ್ಜಿಕಲ್ ಆಂಡ್ ಇಂಜಿನಿಯರಿಂಗ್ ಕನ್ಸಲ್ಟೆಂಟ್ (ಇಂಡಿಯಾ) ಲಿಮಿಟೆಡ್;

(ii) ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ ಮತ್ತು ಆಂಧ್ರ ಪ್ರದೇಶ ರಾಜ್ಯದ ಹೈದರಾಬಾದ್‌ನಲ್ಲಿ ತನ್ನ ಕಚೇರಿಯನ್ನು ಹೊಂದಿರುವ ಒಂದು ಕಂಪನಿಯಾದ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್;

(iii) ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ ಮತ್ತು ಪಶ್ಚಿಮ ಬಂಗಾಳ ರಾಜ್ಯದ ಕಲ್ಕತ್ತಾದಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಹಿಂದೂಸ್ತಾನ್ ಸ್ಟೀಲ್ ವರ್ಕ್ಸ್ ಕನ್‌ಸ್ಟ್ರಕ್ಷನ್ ಲಿಮಿಟೆಡ್;

(iv) ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ ಮತ್ತು ಬಿಹಾರ್ ರಾಜ್ಯದ ಬೊಕಾರೋ ಸ್ಟೀಲ್ ಸಿಟಿಯಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಭಾರತ್ ರಿಫ್ರಾಕ್ಟೀಸ್ ಲಿಮಿಟೆಡ್;

(v) ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ ಮತ್ತು ಮಹಾರಾಷ್ಟ್ರ ರಾಜ್ಯದ ಮುಂಬಯಿಯಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಇಂಡಿಯಾ ಫೈರ್‌ಬ್ರಿಕ್ಸ್ ಮತ್ತು ಇನ್ಸುಲೇಷನ್ ಕಂಪನಿ ಲಿಮಿಟೆಡ್;

(ಹೆಚ್) "ವರ್ಗಾಯಿತ ಘಟಕ" ಎಂದರೆ -

(i) ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಲಿಮಿಟೆಡ್‌ನ ಒಂದು ಘಟಕವಾದ ಕಿರಿಬುರು ಐರನ್ ಓರ್ ಮೈನ್ಸ್; ಅಥವಾ

(ii) ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಲಿಮಿಟೆಡ್‌ನ ಒಂದು ಘಟಕವಾದ ಮೇಘಾ ಹಾಟುಬುರು ಐರನ್ ಓರ್ ಪ್ರಾಜೆಕ್ಟ್;

(iii) ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ನ ಒಂದು ಘಟಕವಾದ ರಾಮ್‌ಘಢ್ ರಿಫ್ರಾ ್ಯಕ್ಟರಿ ಪ್ಲಾಂಟ್ (ಬಿಹಾರ್ ರಾಜ್ಯದ ರಾಮ್‌ಘಢ್ ಹತ್ತಿರ ಇರುವಂತಹುದು);

(iv) ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ನ ಒಂದು ಘಟಕವಾದ ರಿಫ್ರಾ ್ಯಕ್ಟರಿ ಪ್ರಾಜೆಕ್ಟ್ (ಮಧ್ಯಪ್ರದೇಶ ರಾಜ್ಯದ ಭಿಲಾಯಿಯಲ್ಲಿರುವಂತಹುದು); ಅಥವಾ

(v) ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ನ ಒಂದು ಘಟಕವಾದ ಸಿಲ್ಲಿಮನೆಟ್ ಮೈನ್ಸ್ (ಮೇಘಾಲಯ ರಾಜ್ಯದಲ್ಲಿರುವಂತಹುದು).

(2) ಇಲ್ಲಿ ಬಳಸಲಾದ ಮತ್ತು ಪರಿಭಾಷಿಸಿರದ, ಆದರೆ ಕಂಪನಿಗಳ ಅಧಿನಿಯಮದಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು, ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

3. 'ಉದ್ಯಮ'ದ ಅರ್ಥ:- ಈ ಅಧಿನಿಯಮದ ಉದ್ದೇಶಗಳಿಗಾಗಿ, ಒಂದು ವಿಸರ್ಜಿತ ಕಂಪನಿಯ ಅಥವಾ ಒಂದು ವರ್ಗಾಯಿತ ಘಟಕದ ಉದ್ಯಮವು, ಗೊತ್ತುಪಡಿಸಲಾದ ದಿನಕ್ಕೆ ನಿಕಟಪೂರ್ವದಲ್ಲಿ ಸಂದರ್ಭಾನುಸಾರ ಆ ವಿಸರ್ಜಿತ ಕಂಪನಿಯ ಅಥವಾ ಆ ವರ್ಗಾಯಿತ ಘಟಕದ ಒಡೆತನದಲ್ಲಿ, ಸ್ವಾಧೀನದಲ್ಲಿ, ಅಧಿಕಾರದಲ್ಲಿ ಅಥವಾ ನಿಯಂತ್ರಣದಲ್ಲಿದ್ದಂಥ (ಭಾರತದೊಳಗಿನ ಅಥವಾ ಹೊರಗಿನ) ಎಲ್ಲ ಆಸ್ತಿಗಳು, ಹಕ್ಕುಗಳು (ಗಣಿ ಗುತ್ತಿಗೆಗಳು ಯಾವುವಾದರೂ ಇದ್ದರೆ ಅವು ಸೇರಿದಂತೆ) ಗುತ್ತಿಗೆ ಹಿಡುವಳಿಗಳು, ಕೈಗಾರಿಕಾ ಅಥವಾ ಇತರ ಲೈಸೆನ್ಸ್‌ಗಳು, ಅಧಿಕಾರಗಳು, ಅಧಿಕಾರ ಪತ್ರಗಳು ಮತ್ತು ವಿಶೇಷಾಧಿಕಾರಗಳು ಮತ್ತು ಜಮೀನುಗಳು, ಕಟ್ಟಡಗಳು, ಕಾಮಗಾರಿಗಳು, ಗಣಿಗಳು, ಕಾರ್ಯಾಗಾರಗಳು, ಯೋಜನೆಗಳು, ಭಟ್ಟಿಗಳು, ಉಗ್ರಾಣಗಳು, ಉಪಕರಣಗಳು, ಯಂತ್ರಸಾಮಗ್ರಿ, ಆಟೋಮೋಬೈಲ್‌ಗಳು ಮತ್ತು ಇತರ ವಾಹನಗಳು, ನಗದು ಅಥವಾ ಬ್ಯಾಂಕ್ ಶುಲ್ಕಗಳು, ಕೈಯಲ್ಲಿನ ಹಣ, ಹೂಡಿಕೆಗಳು ಮತ್ತು ಪುಸ್ತಕ ಋಣಗಳು ಮತ್ತು ಅಂಥ ಸ್ವತ್ತಿನಲ್ಲಿನ ಅಥವಾ ಅದರಿಂದ ಉದ್ಭವಿಸುವ ಎಲ್ಲ ಇತರ ಹಕ್ಕುಗಳು ಮತ್ತು ಹಿತಾಸಕ್ತಿಗಳು - ಇವುಗಳು ಸೇರಿದಂತೆ ಎಲ್ಲ ಚರ ಮತ್ತು ಸ್ಥಿರ ಸ್ವತ್ತು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ಲೆಕ್ಕ ಪುಸ್ತಕಗಳು, ರಿಜಿಸ್ಟರುಗಳು, ಭೂಪಟಗಳು, ರೇಖಾ ಚಿತ್ರಗಳು, ಮೋಜಣಿಯ ದಾಖಲೆಗಳು ಮತ್ತು ಯಾವುದೇ ಸ್ವರೂಪದ ಇತರ ಎಲ್ಲ ದಸ್ತಾವೇಜುಗಳು - ಇವುಗಳನ್ನು ಒಳಗೊಂಡಿರುವುದಾಗಿ ಭಾವಿಸತಕ್ಕದು ಮತ್ತು ಆ ವಿಸರ್ಜಿತ ಕಂಪನಿಯ ಅಥವಾ ಆ ವರ್ಗಾಯಿತ ಘಟಕದ ಯಾವುದೇ ಬಗೆಯ ಎಲ್ಲ ಸಾಲಗಳನ್ನು, ಹೊಣೆಗಾರಿಕೆಗಳನ್ನು ಮತ್ತು ಬಾಧ್ಯತೆಗಳನ್ನು ಸಹ ಒಳಗೊಂಡಿರುವುದಾಗಿ ಭಾವಿಸತಕ್ಕದು.

ವಿವರಣೆ:- ಈ ಪ್ರಕರಣದಲ್ಲಿ ಒಂದು ವರ್ಗಾಯಿತ ಘಟಕದ ಉದ್ಯಮದ ಬಗ್ಗೆ ಇರುವ ಉಲ್ಲೇಖವು, ಒಂದು ಘಟಕವಾಗಿರುವ ಆ ಕಂಪನಿಯ ಉದ್ಯಮದ ಎಷ್ಟು ಭಾಗವು ಅದು ಒಂದು ಪ್ರತ್ಯೇಕ ಕಂಪನಿಯಾಗಿದ್ದರೆ ಅದಕ್ಕೆ ಸಂಬಂಧಪಡಬಹುದೋ ಅಷ್ಟು ಭಾಗದ ಬಗ್ಗೆ ಇರುವ ಉಲ್ಲೇಖವೆಂದು ಭಾವಿಸತಕ್ಕುದು.

## ಅಧ್ಯಾಯ - ii

## ಕೆಲವು ಕಂಪನಿಗಳ ಉದ್ಯಮಗಳನ್ನು ವಿಸರ್ಜಿಸುವುದು, ವರ್ಗಾವಣೆ ಮಾಡುವುದು ಮತ್ತು ನಿಹಿತಗೊಳಿಸುವುದು.

4. **ಕೆಲವು ಕಂಪನಿಗಳ ಉದ್ಯಮಗಳನ್ನು ವಿಸರ್ಜಿಸುವುದು, ಇಂಟೆಗ್ರಲ್ ಕಂಪನಿಗೆ ವರ್ಗಾವಣೆ ಮಾಡುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು:–** ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಕಂಪನಿಗಳು ಗೊತ್ತುಪಡಿಸಲಾದ ದಿವಸದಂದು ವಿಸರ್ಜನೆಗೊಳ್ಳತಕ್ಕುದು ಮತ್ತು 6 ಮತ್ತು 7ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಅಂಥ ಕಂಪನಿಗಳ ಎಲ್ಲ ಉದ್ಯಮಗಳು ಇಂಟೆಗ್ರಲ್ ಕಂಪನಿಗೆ ವರ್ಗಾವಣೆಗೊಳ್ಳತಕ್ಕುದು ಮತ್ತು ಅವುಗಳು ಅದರಲ್ಲಿ ನಿಹಿತಗೊಳ್ಳತಕ್ಕುದು.

5. **ಇಂಟೆಗ್ರಲ್ ಕಂಪನಿಗೆ ಕಿರಿಬುರು ಐರನ್ ಓರ್ ಮೈನ್ಸ್ ಮುಂತಾದವುಗಳನ್ನು ವರ್ಗಾಯಿಸುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು:–** ಈ ಕೆಳಕಂಡ ವರ್ಗಾಯಿತ ಘಟಕಗಳ ಉದ್ಯಮಗಳು ಗೊತ್ತುಪಡಿಸಲಾದ ದಿವಸದಂದು, ಇಂಟೆಗ್ರಲ್ ಕಂಪನಿಗೆ ವರ್ಗಾವಣೆಗೊಳ್ಳತಕ್ಕುದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕುದು, ಆ ಉದ್ಯಮಗಳೆಂದರೆ:-

(ಎ) ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್‌ನ ಒಂದು ಘಟಕವಾದ, ಕಿರಿಬುರು ಐರನ್ ಓರ್ ಮೈನ್ಸ್, ಮತ್ತು

(ಬಿ) ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ - ಇದರ ಒಂದು ಘಟಕವಾದ, ಮೇಘಾ ಹಾಟುಬುರು ಐರನ್ ಓರ್ ಪ್ರಾಜೆಕ್ಟ್.

6. **ಭಾರತ್ ರಿಫ್ಯಾಕ್ಟರೀಸ್ ಲಿಮಿಟೆಡ್ ಇದಕ್ಕೆ ರಿಫ್ರಾಕ್ಟರೀಸ್ ಪ್ಲಾಂಟ್, ಇತ್ಯಾದಿಗಳನ್ನು ವರ್ಗಾಯಿಸುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು:–** (1) ಗೊತ್ತುಪಡಿಸಲಾದ ದಿನದಂದು, ವರ್ಗಾಯಿತವಾದ ಈ ಕೆಳಕಂಡ ಘಟಕಗಳ ಉದ್ಯಮಗಳು ಭಾರತ್ ರಿಫ್ಯಾಕ್ಟರೀಸ್ ಲಿಮಿಟೆಡ್ ಇದಕ್ಕೆ ವರ್ಗಾವಣೆಗೊಳ್ಳತಕ್ಕುದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕುದು, ಎಂದರೆ:-

(ಎ) ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ಗೆ ಸೇರಿದ ರಾಮಘಡ ರಿಫ್ರ್ಯಾಕ್ಟರಿ ಪ್ಲಾಂಟ್ (ಬಿಹಾರ ರಾಜ್ಯದ ರಾಮಘಡದ ಹತ್ತಿರ ಇರುವಂಥದು),

(ಬಿ) ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ನ ಸಿಲಿಮನೈಟ್ ಮೈನ್ಸ್ (ಮೇಘಾಲಯ ರಾಜ್ಯದಲ್ಲಿ ಇರುವಂಥದು), ಮತ್ತು

(ಸಿ) ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ನ ರಿಫ್ರ್ಯಾಕ್ಟರಿ ಪ್ರಾಜೆಕ್ಟ್ (ಮಧ್ಯ ಪ್ರದೇಶ ರಾಜ್ಯದ ಭಿಲಾಯಿಯಲ್ಲಿ ಇರುವಂಥದು).

(2) ಕಂಪನಿಗಳ ಅಧಿನಿಯಮದಲ್ಲಿ ಏನೇ ಇದ್ದರೂ, ಗೊತ್ತುಪಡಿಸಲಾದ ದಿನದಿಂದ ಭಾರತ್ ರಿಫ್ರ್ಯಾಕ್ಟರೀಸ್ ಲಿಮಿಟೆಡ್‌ನ ನೋಂದಾಯಿತ ಕಛೇರಿಯು ಬೊಕಾರೋ ಸ್ಟೀಲ್ ಸಿಟಿಯಲ್ಲಿಯೇ ಉಳಿಯಬಹುದು ಅಥವಾ ಅದನ್ನು ರಾಂಚಿಗೆ ವರ್ಗಾಯಿಸಬಹುದು.

7. **ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ನ ಸ್ಥಿರಸ್ವತ್ತುಗಳನ್ನು ಮೆಟಲರ್ಜಿಕಲ್ ಅಂಡ್ ಇಂಜಿನಿಯರಿಂಗ್ ಕನ್‌ಸಲ್ಟೆಂಟ್ಸ್ (ಇಂಡಿಯಾ) ಲಿಮಿಟೆಡ್‌ಗೆ ವರ್ಗಾಯಿಸುವುದು:–** ಬಿಹಾರ ರಾಜ್ಯದ ರಾಂಚಿ ಜಿಲ್ಲೆಯಲ್ಲಿ ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ನ ಒಡೆತನದಲ್ಲಿರುವ ಸ್ಥಿರಸ್ವತ್ತುಗಳಲ್ಲಿನ ಅದರ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಗಳು ಅದಕ್ಕೆ ಸಂಬಂಧಿಸಿದ ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳೊಂದಿಗೆ ಗೊತ್ತುಪಡಿಸಲಾದ ದಿನದಂದು ಮೆಟಲರ್ಜಿಕಲ್ ಅಂಡ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ (ಇಂಡಿಯಾ) ಲಿಮಿಟೆಡ್ ಇದಕ್ಕೆ ವರ್ಗಾವಣೆಗೊಳ್ಳತಕ್ಕುದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕುದು.

## ಅಧ್ಯಾಯ - iii

## ಷೇರುಗಳ ವರ್ಗಾವಣೆ

8. **ಬೊಕಾರೋ ಸ್ಟೀಲ್ ಲಿಮಿಟೆಡ್ ಹೊಂದಿರುವ ಷೇರುಗಳನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸುವುದು:–** ಭಾರತ್ ರಿಫ್ರ್ಯಾಕ್ಟರೀಸ್ ಲಿಮಿಟೆಡ್‌ನ ಷೇರು ಬಂಡವಾಳದಲ್ಲಿ ಬೊಕಾರೋ ಸ್ಟೀಲ್ ಲಿಮಿಟೆಡ್ ಹೊಂದಿರುವ ಎಲ್ಲ ಷೇರುಗಳು ಗೊತ್ತುಪಡಿಸಲಾದ ದಿನದಂದು ಕೇಂದ್ರ ಸರ್ಕಾರಕ್ಕೆ ವರ್ಗಾವಣೆಗೊಳ್ಳತಕ್ಕುದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕುದು.

9. **ಇಂಟೆಗ್ರಲ್ ಕಂಪನಿಯು ಹೊಂದಿರುವ ಷೇರುಗಳನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸುವುದು:–** ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಪ್ರತಿಯೊಂದು ಕಂಪನಿಯ ಷೇರು ಬಂಡವಾಳದಲ್ಲಿ ಇಂಟೆಗ್ರಲ್ ಕಂಪನಿಯು ಹೊಂದಿರುವ ಎಲ್ಲ ಷೇರುಗಳು ಗೊತ್ತುಪಡಿಸಲಾದ ದಿನದಂದು ಕೇಂದ್ರ ಸರ್ಕಾರಕ್ಕೆ ವರ್ಗಾವಣೆಗೊಳ್ಳತಕ್ಕುದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕುದು.

**10. ಇಂಟೆಗ್ರಲ್ ಕಂಪನಿಯು ಹೊಂದಿರುವ ಷೇರುಗಳನ್ನು ಭಾರತ್ ರಿಫ್ಯಾಕ್ಟರೀಸ್ ಲಿಮಿಟೆಡ್‌ಗೆ ವರ್ಗಾಯಿಸುವುದು:-** ಇಂಡಿಯಾ ಫೈರ್‌ಬ್ರಿಕ್ಸ್ ಅಂಡ್ ಇನ್ಸುಲೇಷನ್ ಕಂಪನಿ ಲಿಮಿಟೆಡ್ (ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ಮಹಾರಾಷ್ಟ್ರ ರಾಜ್ಯದ ಮುಂಬೈಯಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಒಂದು ಕಂಪನಿ) ಇದರ ಷೇರು ಬಂಡವಾಳದಲ್ಲಿ ಇಂಟೆಗ್ರಲ್ ಕಂಪನಿಯು ಹೊಂದಿರುವ ಎಲ್ಲ ಷೇರುಗಳು ಗೊತ್ತುಪಡಿಸಲಾದ ದಿನದಂದು ಭಾರತ್ ರಿಫ್ರಾ ್ಯಕ್ಟರೀಸ್ ಲಿಮಿಟೆಡ್‌ಗೆ ವರ್ಗಾವಣೆಗೊಳ್ಳತಕ್ಕುದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕುದು.

**11. ಕೇಂದ್ರ ಸರ್ಕಾರವು ಹೊಂದಿರುವ ಷೇರುಗಳನ್ನು ಇಂಟೆಗ್ರಲ್ ಕಂಪನಿಗೆ ವರ್ಗಾಯಿಸುವುದು:-** ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿ ಲಿಮಿಟೆಡ್ (ಪಶ್ಚಿಮ ಬಂಗಾಳ ರಾಜ್ಯದ ಕಲ್ಕತ್ತಾದಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿರುವ ಕಂಪನಿಗಳ ಅಧಿನಿಯಮದ ಮೇರೆಗಿನ ಒಂದು ಕಂಪನಿ) ಇದರ ಷೇರು ಬಂಡವಾಳದಲ್ಲಿ ಕೇಂದ್ರ ಸರ್ಕಾರವು ಹೊಂದಿರುವ ಎಲ್ಲ ಷೇರುಗಳು ಇಂಟೆಗ್ರಲ್ ಕಂಪನಿಗೆ ವರ್ಗಾವಣೆಗೊಳ್ಳತಕ್ಕುದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕುದು.

**12. ಕೇಂದ್ರ ಸರ್ಕಾರ ಮುಂತಾದವುಗಳನ್ನು ಕಂಪನಿಗಳ ಸದಸ್ಯರ ರಿಜಿಸ್ಟರಿನಲ್ಲಿ ನೋಂದಾಯಿಸಲಾಗಿದೆ ಎಂದು ಭಾವಿಸತಕ್ಕುದು:-** ಸಂದರ್ಭಾನುಸಾರ 8ನೇ, 9ನೇ, 10ನೇ ಅಥವಾ 11ನೇ ಪ್ರಕರಣದ ಉಪಬಂಧಗಳ ಕಾರಣದಿಂದಾಗಿ, ಸಂದರ್ಭಾನುಸಾರ, ಕೇಂದ್ರ ಸರ್ಕಾರ, ಭಾರತ್ ರಿಫ್ರಾ ್ಯಕ್ಟರೀಸ್ ಲಿಮಿಟೆಡ್ ಅಥವಾ ಇಂಟೆಗ್ರಲ್ ಕಂಪನಿ, ಇವುಗಳ ಪೈಕಿ ಪ್ರತಿಯೊಂದಕ್ಕೆ ವರ್ಗಾಯಿತವಾದ ಮತ್ತು ಅದರಲ್ಲಿ ನಿಹಿತವಾದ ಪ್ರತಿಯೊಂದು ಷೇರಿನ ಧಾರಕ ಎಂದು ಸಂಬಂಧಪಟ್ಟ ಕಂಪನಿಗಳ ಸದಸ್ಯರ ರಿಜಿಸ್ಟರಿನಲ್ಲಿ ಗೊತ್ತುಪಡಿಸಲಾದ ದಿನದಿಂದ ಅವುಗಳನ್ನು ನೋಂದಾಯಿಸಲಾಗಿದೆ ಎಂದು ಭಾವಿಸತಕ್ಕುದು.

**13. ಇಂಟೆಗ್ರಲ್ ಕಂಪನಿ ಮುಂತಾದವುಗಳ ಸಂದಾಯಿತ ಷೇರು ಬಂಡವಾಳವನ್ನು ಮಾರ್ಪಾಟು ಮಾಡಲು ಕೇಂದ್ರ ಸರ್ಕಾರದ ಅಧಿಕಾರ ಮತ್ತು ಷೇರುಗಳ ನೀಡಿಕೆ:-** ಈ ಅಧಿನಿಯಮದ ಉಪಬಂಧಗಳ ಮೇರೆಗೆ, ಸಂದರ್ಭಾನುಸಾರ ಷೇರುಗಳನ್ನು, ಉದ್ಯಮಗಳನ್ನು ಅಥವಾ ಸ್ಥಿರ ಸ್ವತ್ತುಗಳನ್ನು ವರ್ಗಾವಣೆ ಮಾಡಿದುದರ ಪರಿಣಾಮವಾಗಿ ಇಂಟೆಗ್ರಲ್ ಕಂಪನಿ, ಭಾರತ್ ರಿಫ್ರಾ ್ಯಕ್ಟರೀಸ್ ಲಿಮಿಟೆಡ್, ಮೆಟಲರ್ಜಿಕಲ್ ಅಂಡ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ (ಇಂಡಿಯಾ) ಲಿಮಿಟೆಡ್, ಮತ್ತು ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ ಇವುಗಳ ಸಂದಾಯಿತ ಷೇರು ಬಂಡವಾಳದ ಮೊಬಲಗು ಎಷ್ಟು ಕಡಿಮೆಗೊಳ್ಳತಕ್ಕುದು ಅಥವಾ ಹೆಚ್ಚಾಗತಕ್ಕುದು ಎಂಬುದನ್ನು ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ನಿರ್ದಿಷ್ಟಪಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಮೊಬಲಗನ್ನು ನಿರ್ದಿಷ್ಟಪಡಿಸುವಲ್ಲಿ ಕೇಂದ್ರ ಸರ್ಕಾರವು, ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕುದು, ಎಂದರೆ:-

(1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಕಂಪನಿಗಳಿಗೆ ಅಥವಾ ಅವುಗಳಿಂದ ವರ್ಗಾಯಿತವಾದಂತೆ -

**(i)** ಗೊತ್ತು ಪಡಿಸಲಾದ ದಿನದಂದು, ಸಂದರ್ಭಾನುಸಾರ 8ನೇ, 9ನೇ, 10ನೇ ಅಥವಾ 11ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಸಂಬಂಧಪಟ್ಟ ಕಂಪನಿಯ ಷೇರುಗಳ ಪುಸ್ತಕ ಮೌಲ್ಯ,

**(ii)** ಗೊತ್ತು ಪಡಿಸಲಾದ ದಿನದಂದು ಇದ್ದಂತೆ ವಿಸರ್ಜಿತ ಕಂಪನಿಯ ಮತ್ತು ವರ್ಗಾಯಿತ ಘಟಕದ ಉದ್ಯಮಗಳ ನಿವ್ವಳ ಮೌಲ್ಯ, ಮತ್ತು

**(iii)** ಗೊತ್ತು ಪಡಿಸಲಾದ ದಿನದಂದು ಇದ್ದಂತೆ, 7ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ನ ಒಡೆತನದಲ್ಲಿರುವ ಸ್ಥಿರ ಸ್ವತ್ತುಗಳ ಪುಸ್ತಕ ಮೌಲ್ಯ.

(3) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಆದೇಶವನ್ನು ಗೊತ್ತುಪಡಿಸಲಾದ ದಿನದಿಂದ ಒಂದು ವರ್ಷದ ಅವಧಿಯೊಳಗಾಗಿ ಮಾಡತಕ್ಕುದು ಮತ್ತು ಯಾವುದೇ ಅಂಥ ಆದೇಶವು ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ಜಾರಿಗೆ ಬರಬಹುದು, ಆದರೆ ಗೊತ್ತುಪಡಿಸಲಾದ ದಿನಕ್ಕೆ ಮುಂಚಿನ ದಿನಾಂಕದಿಂದ ಅದು ಜಾರಿಗೆ ಬರುವುದಿಲ್ಲ.

(4) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮಾಡಿದ ಯಾವುದೇ ಆದೇಶವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಸೂಕ್ತ ಸಂಖ್ಯೆಯ ಷೇರುಗಳ ನೀಡಿಕೆಯ ಅಥವಾ ರದ್ದಿಯಾತಿಯ ಬಗ್ಗೆ ನಿರ್ದೇಶನವನ್ನು ಒಳಗೊಳ್ಳಬಹುದು.

## ಅಧ್ಯಾಯ- IV

### ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂಬಂಧಿಸಿದ ಉಪಬಂಧಗಳು

**14. ವಿಸರ್ಜಿತ ಕಂಪನಿಗಳ ಅಧಿಕಾರಿಗಳು ಮತ್ತು ಇತರ ನೌಕರರಿಗೆ ಸಂಬಂಧಿಸಿದ ಉಪಬಂಧಗಳು:-** (1) ವಿಸರ್ಜಿತ ಕಂಪನಿಯಲ್ಲಿ ಗೊತ್ತುಪಡಿಸಲಾದ ದಿನಕ್ಕೆ ನಿಕಟಪೂರ್ವದಲ್ಲಿ ಅಂಥ ಕಂಪನಿಯ ಯಾವುದೇ ಉದ್ಯಮದ ಸಂಬಂಧದಲ್ಲಿ (ನಿರ್ದೇಶಕನಾಗಿರದ) ಯಾವ ಅಧಿಕಾರಿಯು ಅಥವಾ ಇತರೆ ನೌಕರನು ಪದಧಾರಣ ಮಾಡಿರುವವನೋ ಮತ್ತು ಯಾವನು 6ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ವರ್ಗಾಯಿತ ಘಟಕಗಳ ಸಂಬಂಧದಲ್ಲಿ ಅಂಥ ಪದಧಾರಣ ಮಾಡಿದ ಒಬ್ಬ ಅಧಿಕಾರಿ ಅಥವಾ ಇತರ ನೌಕರನಾಗಿಲ್ಲವೋ ಆ ಪ್ರತಿಯೊಬ್ಬ

ಅಧಿಕಾರಿ ಅಥವಾ ಇತರ ನೌಕರನು, ಅವನು ಪದಧಾರಣ ಮಾಡಿದ್ದ ಕಂಪನಿಯು ವಿಸರ್ಜನೆಯಾಗಿರದಿದ್ದರೆ ಅವನಿಗೆ ಅನ್ವಯವಾಗಬಹುದಾಗಿದ್ದಂಥದೇ ಅವಧಿ ಮತ್ತು ಅಂಥವೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಹಾಗೂ ನಿವೃತ್ತಿ ಪ್ರಯೋಜನಗಳ ಬಗ್ಗೆ ಅಂಥವೇ ಹಕ್ಕುಗಳು ಮತ್ತು ವಿಶೇಷ ಅಧಿಕಾರಗಳೊಂದಿಗೆ ಗೊತ್ತುಪಡಿಸಲಾದ ದಿವಸದಿಂದ ಇಂಟೆಗ್ರಲ್ ಕಂಪನಿಯ ಸಂವಾದಿ ಘಟಕದಲ್ಲಿ ಅಂಥದೇ ಪದಧಾರಣ ಮಾಡಿರುವುದು ಮುಂದುವರಿಯತಕ್ಕುದು ಮತ್ತು ಇಂಟೆಗ್ರಲ್ ಕಂಪನಿಯು ಅಂಥ ಅವಧಿ ಮತ್ತು ನಿಬಂಧನೆಗಳು ಮತ್ತು ಷರತ್ತುಗಳನ್ನು ಯುಕ್ತವಾಗಿ ವ್ಯತ್ಯಸ್ತಗೊಳಿಸುವ ಹೊರತು ಮತ್ತು ವ್ಯತ್ಯಸ್ತಗೊಳಿಸುವವರೆಗೆ ಅವನು ಹಾಗಿರುವುದು ಮುಂದುವರಿಯತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಗೊತ್ತುಪಡಿಸಲಾದ ದಿನದ ನಿಕಟಪೂರ್ವದಲ್ಲಿದ್ದಂತೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳು ಅಥವಾ ಇತರ ನೌಕರರಿಗೆ ಅನ್ವಯವಾಗುವ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ನಿಯಮಗಳು ಮತ್ತು ಸ್ಥಾಯಿ ಆದೇಶಗಳು, ಅವುಗಳನ್ನು ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಯು ಅಥವಾ ಇತರೆ ಪ್ರಾಧಿಕಾರವು ಯುಕ್ತವಾಗಿ ವ್ಯತ್ಯಸ್ತಗೊಳಿಸುವ ಹೊರತು ಮತ್ತು ವ್ಯತ್ಯಸ್ತಗೊಳಿಸುವವರೆಗೆ ಅನ್ವಯವಾಗುವುದು ಮುಂದುವರೆಯತಕ್ಕುದು.

15. **ವರ್ಗಾಯಿತ ಘಟಕಗಳ ಅಧಿಕಾರಿಗಳು ಮತ್ತು ನೌಕರರಿಗೆ ಸಂಬಂಧಿಸಿದ ಉಪಬಂಧಗಳು:-** (1) ಗೊತ್ತುಪಡಿಸಲಾದ ದಿವಸದ ನಿಕಟ ಪೂರ್ವದಲ್ಲಿ ವರ್ಗಾಯಿತ ಘಟಕದಲ್ಲಿ ಪದಧಾರಣ ಮಾಡಿದ ಪ್ರತಿಯೊಬ್ಬ ಅಧಿಕಾರಿಯು ಅಥವಾ ಇತರ ನೌಕರನು, ಅವನು ಪದಧಾರಣ ಮಾಡಿದ್ದ ವರ್ಗಾಯಿತ ಘಟಕವನ್ನು ವರ್ಗಾಯಿಸಿಲ್ಲದಿದ್ದರೆ ಅವನಿಗೆ ಅನ್ವಯವಾಗಬಹುದಾಗಿದ್ದಂಥದೇ ಅವಧಿ ಮತ್ತು ಅಂಥವೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಹಾಗೂ ನಿವೃತ್ತಿ ಪ್ರಯೋಜನಗಳ ಬಗ್ಗೆ ಅಂಥವೇ ಹಕ್ಕುಗಳು ಮತ್ತು ವಿಶೇಷ ಅಧಿಕಾರಗಳೊಂದಿಗೆ, ಗೊತ್ತುಪಡಿಸಿದ ದಿನದಿಂದ ವರ್ಗಾವಣೆಧಾರಕ ಕಂಪನಿಯ ಸಂವಾದಿ ಘಟಕದ ಒಬ್ಬ ಅಧಿಕಾರಿಯಾಗಿ ಅಥವಾ ನೌಕರನಾಗಿ ಮುಂದುವರಿಯತಕ್ಕುದು ಮತ್ತು ವರ್ಗಾವಣೆ ಧಾರಕ ಕಂಪನಿಯು ಅಂಥ ಅವಧಿಯನ್ನು, ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಯುಕ್ತವಾಗಿ ವ್ಯತ್ಯಸ್ತಗೊಳಿಸುವ ಹೊರತು ಮತ್ತು ವ್ಯತ್ಯಸ್ತಗೊಳಿಸುವವರೆಗೆ ಅವನು ಹಾಗಿರುವುದು ಮುಂದುವರಿಯತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಗೊತ್ತುಪಡಿಸಲಾದ ದಿವಸದ ನಿಕಟಪೂರ್ವದಲ್ಲಿದ್ದಂತೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳಿಗೆ ಅಥವಾ ಇತರೆ ನೌಕರರಿಗೆ ಅನ್ವಯವಾಗುವ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ನಿಯಮಗಳು ಮತ್ತು ಸ್ಥಾಯಿ ಆದೇಶಗಳು, ಅವುಗಳನ್ನು ಸಂದರ್ಭಾನುಸಾರ ವರ್ಗಾವಣೆ ಧಾರಕ ಕಂಪನಿ ಅಥವಾ ಇತರ ಪ್ರಾಧಿಕಾರವು ಯುಕ್ತವಾಗಿ ವ್ಯತ್ಯಸ್ತಗೊಳಿಸುವ ಹೊರತು ಮತ್ತು ವ್ಯತ್ಯಸ್ತಗೊಳಿಸುವವರೆಗೆ ಅನ್ವಯವಾಗುವುದು ಮುಂದುವರೆಯತಕ್ಕುದು.

16. **ನಿರ್ದೇಶಕರಿಗೆ ಸಂಬಂಧಿಸಿದ ಉಪಬಂಧಗಳು:-** (1) ಗೊತ್ತುಪಡಿಸಲಾದ ದಿವಸದ ನಿಕಟಪೂರ್ವದಲ್ಲಿ ವಿಸರ್ಜಿತ ಕಂಪನಿಯ ನಿರ್ದೇಶಕನಾಗಿ ಪದಧಾರಣ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಯು, ಆ ದಿವಸದಂದು ಹಾಗೆ ನಿರ್ದೇಶಕನಾಗಿ ಪದಧಾರಣ ಮಾಡಿರುವುದು ನಿಂತು ಹೋಗತಕ್ಕುದು.

(2) ಗೊತ್ತುಪಡಿಸಲಾದ ದಿವಸದ ನಿಕಟ ಪೂರ್ವದಲ್ಲಿ, ವಿಸರ್ಜಿತ ಕಂಪನಿಯ ಪೂರ್ಣಕಾಲಿಕ ನಿಯೋಜನೆಯಲ್ಲಿ ನಿರ್ದೇಶಕರಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಇಂಟೆಗ್ರಲ್ ಕಂಪನಿಯು ನಿರ್ಧರಿಸಬಹುದಾದಂಥ ಪದನಾಮದೊಂದಿಗೆ ಮತ್ತು ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಇಂಟೆಗ್ರಲ್ ಕಂಪನಿಯ ಸಂವಾದಿ ಘಟಕದ ಒಬ್ಬ ನೌಕರರಾಗಿ ಮುಂದುವರೆಯತಕ್ಕುದು.

17. **ಲೆಕ್ಕಪರಿಶೋಧಕರಿಗೆ ಸಂಬಂಧಿಸಿದ ಉಪಬಂಧ:-** ಗೊತ್ತುಪಡಿಸಲಾದ ದಿವಸದ ನಿಕಟಪೂರ್ವದಲ್ಲಿ, ಕಂಪನಿಗಳ ಅಧಿನಿಯಮದ 619ನೇ ಪ್ರಕರಣದ ಮೇರೆಗೆ ವಿಸರ್ಜಿತ ಕಂಪನಿಯ ಅಥವಾ ವರ್ಗಾಯಿತ ಘಟಕದ ಒಬ್ಬ ಲೆಕ್ಕಪರಿಶೋಧಕನೆಂದು ನೇಮಕಗೊಂಡಿದ್ದು ಗೊತ್ತುಪಡಿಸಲಾದ ದಿನದ ನಿಕಟಪೂರ್ವದಲ್ಲಿ ಪದಧಾರಣ ಮಾಡಿದ ಪ್ರತಿಯೊಬ್ಬ ವ್ಯಕ್ತಿಯು, ಅವನನ್ನು ಹಾಗೆ ನೇಮಕ ಮಾಡಲಾಗಿದ್ದ ಅವಧಿಗಾಗಿ, ಅವನಿಗೆ ಗೊತ್ತುಪಡಿಸಲಾದ ದಿವಸಕ್ಕೆ ನಿಕಟಪೂರ್ವದಲ್ಲಿ ಅನ್ವಯವಾಗಿದ್ದಂಥವೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಯ ಅಥವಾ ಯಾವುದೇ ಇತರೆ ವರ್ಗಾವಣೆಧಾರಕ ಕಂಪನಿಯ ಸಂವಾದಿ ಘಟಕದಲ್ಲಿ, ಅಂಥ ಲೆಕ್ಕಪರಿಶೋಧಕನಾಗಿ ಪದಧಾರಣ ಮಾಡುವುದು ಮುಂದುವರಿಯಬಹುದು.

18. **ವರ್ಗಾವಣೆಗಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡದಿರುವುದು:-** ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಯಾರೇ ಅಧಿಕಾರಿಯ ಅಥವಾ ಇತರೆ ನೌಕರನ ಸೇವೆಗಳ ವರ್ಗಾವಣೆಯಿಂದಾಗಿ, ಅಂಥ ಅಧಿಕಾರಿಯು ಅಥವಾ ಇತರೆ ನೌಕರನು ಆ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಮೇರೆಗೆ ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕುದಲ್ಲ ಮತ್ತು ಅಂಥ ನಷ್ಟ ಪರಿಹಾರದ ಬಗ್ಗೆ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯವು, ನ್ಯಾಯಾಧಿಕರಣವು ಅಥವಾ ಇತರೆ ಪ್ರಾಧಿಕಾರವು ಪುರಸ್ಕರಿಸತಕ್ಕುದಲ್ಲ.

**19. ಭವಿಷ್ಯ ನಿಧಿ:-** ಒಂದು ವರ್ಗಾಯಿತ ಘಟಕದ ಸಂಬಂಧದಲ್ಲಿ ಒಂದು ವಿಸರ್ಜಿತ ಕಂಪನಿಯು ಅಥವಾ ಇತರೆ ಯಾವುದೇ ಕಂಪನಿಯು ನೌಕರರ ಪ್ರಯೋಜನಕ್ಕಾಗಿ ಭವಿಷ್ಯ ನಿಧಿಯನ್ನು ಸ್ಥಾಪಿಸಿರುವಲ್ಲಿ ಮತ್ತು ಅದು ನ್ಯಾಸದಲ್ಲಿ ನಿಹಿತಗೊಂಡಿರುವಲ್ಲಿ, ಪ್ರತಿಯೊಂದು ಭವಿಷ್ಯ ನಿಧಿಯ ಲೆಕ್ಕದಲ್ಲಿ ಜಮೆ ಇರುವ ಹಣಗಳು ಮತ್ತು ಇತರೆ ಆಸ್ತಿಗಳು ಗೊತ್ತುಪಡಿಸಲಾದ ದಿವಸಕ್ಕೆ ಮುಂಚೆ ಅನ್ವಯವಾಗುತ್ತಿದ್ದಂತಹವೇ ಉದ್ದೇಶಗಳೊಂದಿಗೆ ನ್ಯಾಸವಾಗಿ ಹೊಂದಿರುವುದು ಮುಂದುವರೆಯತಕ್ಕುದು ಮತ್ತು ಗೊತ್ತುಪಡಿಸಲಾದ ದಿವಸಕ್ಕೆ ನಿಕಟ ಪೂರ್ವದಲ್ಲಿ ಅಂಥ ನ್ಯಾಸಗಳ ನ್ಯಾಸಧಾರಿಗಳು ನ್ಯಾಸಪತ್ರಗಳ ಉಪಬಂಧಗಳಿಗೆ ಮತ್ತು ಅಂಥ ನ್ಯಾಸಗಳಿಗೆ ಸಂಬಂಧಿಸಿದ ನಿಯಮಗಳಿಗೊಳಪಟ್ಟು, ಈ ಅಧಿನಿಯಮವು ಅನುಮೋದಿತವಾಗಿಲ್ಲದಿದ್ದರೆ ಹೇಗೋ ಹಾಗೆ ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಯ ಅಥವಾ ಇತರ ವರ್ಗಾವಣೆಧಾರಕ ಕಂಪನಿಯ ಸಂವಾದಿ ಘಟಕದ ಅಂಥ ಭವಿಷ್ಯನಿಧಿಯ ಸಂಬಂಧದಲ್ಲಿ ನ್ಯಾಸಧಾರಿಗಳಾಗಿ ಕಾರ್ಯನಿರ್ವಹಿಸುವುದು ಮುಂದುವರೆಯತಕ್ಕುದು:

ಪರಂತು, ಸಂದರ್ಭಾನುಸಾರ ವಿಸರ್ಜಿತ ಕಂಪನಿಗೆ ಅಥವಾ ವರ್ಗಾಯಿತ ಘಟಕಕ್ಕೆ ಸಂಬಂಧಪಟ್ಟ ಇತರೆ ಕಂಪನಿಯಲ್ಲಿ ನಿಹಿತವಾಗಿರುವ ನ್ಯಾಸಧಾರಿಗಳನ್ನು ನಾಮನಿರ್ದೇಶನ ಮಾಡುವ ಹಕ್ಕು ಮತ್ತು ಆ ನ್ಯಾಸಗಳಿಗೆ ಸಂಬಂಧಿಸಿದ ಇತರೆ ಹಕ್ಕುಗಳು, ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಯಲ್ಲಿ ಅಥವಾ ಇತರೆ ವರ್ಗಾವಣೆ ಧಾರಕ ಕಂಪನಿಯಲ್ಲಿ ನಿಹಿತವಾಗಿರತಕ್ಕುದು.

**20. ಉಪದಾನ, ಕಲ್ಯಾಣ ಮತ್ತು ಇತರ ನಿಧಿಗಳು:-** ವಿಸರ್ಜಿತ ಕಂಪನಿಯು ಅಥವಾ ವರ್ಗಾಯಿತ ಘಟಕಕ್ಕೆ ಸಂಬಂಧಿಸಿದ ಯಾವುದೇ ಇತರ ಕಂಪನಿಯು ತನ್ನ ನೌಕರರ ಪ್ರಯೋಜನಕ್ಕಾಗಿ ಯಾವುದೇ ಉಪದಾನ, ಕಲ್ಯಾಣ ಅಥವಾ ಇತರ ನಿಧಿಯನ್ನು ಸ್ಥಾಪಿಸಿರುವಲ್ಲಿ ಮತ್ತು ಅದು ಗೊತ್ತುಪಡಿಸಲಾದ ದಿವಸಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವಲ್ಲಿ ಅಥವಾ ಅಂಥ ಅನುದಾನ, ಕಲ್ಯಾಣ ಅಥವಾ ಇತರ ನಿಧಿಯ ಲೆಕ್ಕದಲ್ಲಿ ಜಮೆ ಇರುವ ಅಥವಾ ಅದಕ್ಕೆ ಸಂಬಂಧಪಡುವ ಎಲ್ಲ ಹಣಗಳು ಮತ್ತು ಇತರೆ ಆಸ್ತಿಗಳು ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಯ ಅಥವಾ ವರ್ಗಾವಣೆ ಧಾರಕ ಕಂಪನಿಯ ಸಂವಾದಿ ಘಟಕದಲ್ಲಿ ನಿಹಿತವಾಗಿರತಕ್ಕುದು.

## ಅಧ್ಯಾಯ- V
## ಹಣಕಾಸಿಗೆ ಸಂಬಂಧಿಸಿದ ಉಪಬಂಧಗಳು

**21. ಆದಾಯ ತೆರಿಗೆ ಮತ್ತು ಅತಿಕರಕ್ಕೆ ಸಂಬಂಧಿಸಿದ ಉಪಬಂಧಗಳು:-** (1) ಆದಾಯ ತೆರಿಗೆ ಅಧಿನಿಯಮದ ಅಥವಾ ಕಂಪನಿಗಳ (ಲಾಭಗಳ) ಅತಿಕರ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ಮೊತ್ತವನ್ನು ಯಾವುದೇ ವಿಸರ್ಜಿತ ಕಂಪನಿಯು ವಿಸರ್ಜನೆಯಾಗಿರದಿದ್ದರೆ ಅದು ಸಂದಾಯ ಮಾಡಲು ಹೊಣೆಯಾಗಬಹುದಾಗಿದ್ದಿತೋ ಆ ಯಾವುದೇ ಮೊತ್ತವನ್ನು ಇಂಟೆಗ್ರಲ್ ಕಂಪನಿಯು ವಿಸರ್ಜಿತ ಕಂಪನಿಯಂತೆ, ಅದೇ ರೀತಿಯಲ್ಲಿ ಮತ್ತು ಅಷ್ಟು ಮಟ್ಟಿಗೆ ಸಂದಾಯ ಮಾಡಲು ಹೊಣೆಯಾಗತಕ್ಕುದು.

(2) ಸಂದರ್ಭಾನುಸಾರ ಯಾವುದೇ ವಿಸರ್ಜಿತ ಕಂಪನಿಯ ಆದಾಯವನ್ನು ಅಥವಾ ವಿಧಿಸಬಹುದಾದ ಲಾಭಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಮತ್ತು (1)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಯಾವುದೇ ಮೊತ್ತವನ್ನು ವಿಧಿಸುವ ಉದ್ದೇಶಕ್ಕಾಗಿ,-

(ಎ) ಗೊತ್ತುಪಡಿಸಲಾದ ದಿವಸಕ್ಕೆ ಮುಂಚೆ ಯಾವುದೇ ವಿಸರ್ಜಿತ ಕಂಪನಿಯ ವಿರುದ್ಧ ಹೂಡಲಾದ ಯಾವುದೇ ವ್ಯವಹರಣೆಯನ್ನು ಇಂಟೆಗ್ರಲ್ ಕಂಪನಿಯ ವಿರುದ್ಧ ಹೂಡಿರುವುದಾಗಿ ಭಾವಿಸತಕ್ಕುದು ಮತ್ತು ಆ ವ್ಯವಹರಣೆಯು ಗೊತ್ತುಪಡಿಸಲಾದ ದಿವಸದ ನಿಕಟಪೂರ್ವದಲ್ಲಿ ಇದ್ದಂತಹ ಹಂತದಿಂದ ಅದನ್ನು ಇಂಟೆಗ್ರಲ್ ಕಂಪನಿಯ ವಿರುದ್ಧ ಮುಂದುವರೆಸಬಹುದು;

(ಬಿ) ಯಾವುದೇ ವಿಸರ್ಜಿತ ಕಂಪನಿಯು ವಿಸರ್ಜನೆ ಆಗಿರದಿದ್ದರೆ ಅದರ ವಿರುದ್ಧ ಹೂಡಬಹುದಾಗಿದ್ದಂತಹ ಯಾವುದೇ ವ್ಯವಹರಣೆಯನ್ನು ಇಂಟೆಗ್ರಲ್ ಕಂಪನಿಯ ವಿರುದ್ಧ ಹೂಡಬಹುದು; ಮತ್ತು

(ಸಿ) ಸಂದರ್ಭಾನುಸಾರ ಆದಾಯ ತೆರಿಗೆ ಅಧಿನಿಯಮದ ಅಥವಾ ಕಂಪನಿಗಳ (ಲಾಭಗಳ) ಅತಿಕರ ಅಧಿನಿಯಮದ ಎಲ್ಲ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕುದು.

(3) ವಿಸರ್ಜನೆ ಆಗಿರುವಂಥ ಯಾವುದೇ ವಿಸರ್ಜಿತ ಕಂಪನಿಯ ಹಿಂದಿನ ವರ್ಷದ ಆದಾಯವನ್ನು ಅಥವಾ ಸಂದರ್ಭಾನುಸಾರ ವಿಧಿಸಬಹುದಾದ ಲಾಭಗಳನ್ನು ಗೊತ್ತುಪಡಿಸಲಾದ ದಿವಸದವರೆಗೆ, ಅಂಥ ವಿಸರ್ಜನೆ ನಡೆದಿರದಿದ್ದರೆ ಹೇಗೋ ಹಾಗೆ ನಿರ್ಧರಿಸತಕ್ಕುದು ಮತ್ತು ಆದಾಯ ತೆರಿಗೆ ಅಧಿನಿಯಮದ ಮತ್ತು ಕಂಪನಿಗಳ (ಲಾಭಗಳ) ಅತಿಕರ ಅಧಿನಿಯಮದ ಎಲ್ಲ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ತದನುಸಾರವಾಗಿ ಅನ್ವಯವಾಗತಕ್ಕುದು.

(4) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಇಂಟೆಗ್ರಲ್ ಕಂಪನಿಗೆ ಯಾವುದೇ ವಿಸರ್ಜಿತ ಕಂಪನಿಯ ಉದ್ಯಮವನ್ನು ವರ್ಗಾಯಿಸುವುದನ್ನು ಮತ್ತು ಅದರಲ್ಲಿ ನಿಹಿತಗೊಳಿಸುವುದನ್ನು ಅಂಥ ಕಂಪನಿಗಳ ಸಂಬಂಧದಲ್ಲಿ ಸಮ್ಮಿಳನವೆಂದು ಭಾವಿಸತಕ್ಕುದು ಮತ್ತು

ಆದಾಯ ತೆರಿಗೆ ಅಧಿನಿಯಮದಲ್ಲಿ ಸಮ್ಮಿಳಿತವಾಗುತ್ತಿರುವ ಕಂಪನಿ ಮತ್ತು ಸಮ್ಮಿಳಿತವಾದ ಕಂಪನಿಯ ಬಗ್ಗೆ ಇರುವ ಉಲ್ಲೇಖಗಳು ಅನುಕ್ರಮವಾಗಿ ವಿಸರ್ಜಿತ ಕಂಪನಿ ಮತ್ತು ಇಂಟೆಗ್ರಲ್ ಕಂಪನಿಯ ಬಗ್ಗೆ ಇರುವ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೆ, ಸದರಿ ಅಧಿನಿಯಮದ ಉಪಬಂಧಗಳು ಸಾಧ್ಯವಾದಮಟ್ಟಿಗೆ ತದನುಸಾರವಾಗಿ ಅನ್ವಯವಾಗತಕ್ಕುದು.

(5) ಸಂದರ್ಭಾನುಸಾರ ವರ್ಗಾಯಿತ ಘಟಕಕ್ಕೆ ಅಥವಾ ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ಗೆ ಸೇರಿದ ಯಾವುದೇ ಉದ್ಯಮದ ಭಾಗವಾಗಿರುವ ಯಾವುದೇ ಮೂಲ ಆಸ್ತಿಯನ್ನು 5ನೇ ಪ್ರಕರಣದ ಅಥವಾ 6ನೇ ಪ್ರಕರಣದ ಅಥವಾ 7ನೇ ಪ್ರಕರಣದ ಅನುಸಾರವಾಗಿ ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಗೆ ಅಥವಾ ಭಾರತ್ ರಿಫ್ರ್ಯಾಕ್ಟರೀಸ್ ಲಿಮಿಟೆಡ್‌ಗೆ ಅಥವಾ ಮೆಟಲರ್ಜಿಕಲ್ ಅಂಡ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ (ಇಂಡಿಯಾ) ಲಿಮಿಟೆಡ್‌ಗೆ ವರ್ಗಾಯಿಸಿರುವಲ್ಲಿ ಮತ್ತು ಅದರಲ್ಲಿ ನಿಹಿತಗೊಳಿಸಿರುವಲ್ಲಿ, ಅಂಥ ಮೂಲ ಆಸ್ತಿಯನ್ನು ಸಮ್ಮಿಳನ ಯೋಜನೆಯಲ್ಲಿ ವರ್ಗಾಯಿಸಲಾಗಿದೆಯೆಂದು ಭಾವಿಸತಕ್ಕುದು ಮತ್ತು ಆದಾಯ ತೆರಿಗೆ ಅಧಿನಿಯಮದ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಸದರಿ ಅಧಿನಿಯಮದಲ್ಲಿ ಸಮ್ಮಿಳಿತವಾಗುತ್ತಿರುವ ಕಂಪನಿಯ ಬಗ್ಗೆ ಇರುವ ಉಲ್ಲೇಖಗಳು ಸಂದರ್ಭಾನುಸಾರ ವರ್ಗಾಯಿತ ಘಟಕದ ಅಥವಾ ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್ ಬಗ್ಗೆ ಇರುವ ಉಲ್ಲೇಖಗಳಾಗಿದ್ದರೆ ಮತ್ತು ಭಾರತೀಯ ಕಂಪನಿಯಾಗಿರುವ ಸಮ್ಮಿಳಿತವಾದ ಕಂಪನಿ ಬಗ್ಗೆ ಇರುವ ಉಲ್ಲೇಖಗಳು ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿ ಅಥವಾ ಭಾರತ್ ರಿಫ್ರ್ಯಾಕ್ಟರೀಸ್ ಲಿಮಿಟೆಡ್ ಅಥವಾ ಮೆಟಲರ್ಜಿಕಲ್ ಅಂಡ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ (ಇಂಡಿಯಾ) ಲಿಮಿಟೆಡ್ ಬಗ್ಗೆ ಇರುವ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೆ ತದನುಸಾರವಾಗಿ ಅನ್ವಯವಾಗತಕ್ಕುದು.

(6) ಯಾವುದೇ ವಿಸರ್ಜಿತ ಕಂಪನಿಯ ಸಂಚಿತ ನಷ್ಟ ಮತ್ತು ಲೀನಗೊಳ್ಳದ ಇಳಿತಾಯ ಯಾವುವಾದರೂ ಇದ್ದರೆ, ಅವುಗಳನ್ನು ಸಂದರ್ಭಾನುಸಾರ ವಿಸರ್ಜಿತ ಕಂಪನಿಯ ಉದ್ಯಮವು ಇಂಟೆಗ್ರಲ್ ಕಂಪನಿಯಲ್ಲಿ ನಿಹಿತಗೊಂಡಂತಹ ಹಿಂದಿನ ವರ್ಷಕ್ಕಾಗಿ ಇಂಟೆಗ್ರಲ್ ಕಂಪನಿಯ ನಷ್ಟ ಅಥವಾ ಇಳಿತಾಯದ ಬಗ್ಗೆ ರಿಯಾಯಿತಿಯೆಂದು ಭಾವಿಸತಕ್ಕುದು ಮತ್ತು ವಜಾವಟ್ಟು ಮತ್ತು ನಷ್ಟವನ್ನು ಮುಂದಿನ ಲೆಕ್ಕಕ್ಕೆ ಮುಂದುವರೆಸುವುದು ಮತ್ತು ಇಳಿತಾಯದ ಬಗ್ಗೆ ರಿಯಾಯಿತಿ - ಇವುಗಳಿಗೆ ಸಂಬಂಧಪಟ್ಟ ಆದಾಯ ತೆರಿಗೆ ಅಧಿನಿಯಮದ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕುದು.

(7) ಆದಾಯ ತೆರಿಗೆ ಅಧಿನಿಯಮದಲ್ಲಿ ಅಥವಾ ಕಂಪನಿಗಳ (ಲಾಭಗಳ) ಅತಿಕರ ಅಧಿನಿಯಮದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, (1) ರಿಂದ (6) ರವರೆಗಿನ ಉಪಪ್ರಕರಣಗಳ ಉಪಬಂಧಗಳು ಪರಿಣಾಮಕಾರಿಯಾಗತಕ್ಕುದು.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ, -

(ಎ) "ಆದಾಯ ತೆರಿಗೆ" ಅಧಿನಿಯಮ ಎಂದರೆ ಆದಾಯ ತೆರಿಗೆ ಅಧಿನಿಯಮ, 1961 (1961ರ 43)

(ಬಿ) "ಕಂಪನಿಗಳ (ಲಾಭಗಳ) ಅತಿಕರ ಅಧಿನಿಯಮ" ಎಂದರೆ ಕಂಪನಿಗಳ (ಲಾಭಗಳ) ಅತಿಕರ ಅಧಿನಿಯಮ, 1964 (1964ರ 7)

(ಸಿ) ಈ ಪ್ರಕರಣದಲ್ಲಿ ಬಳಸಿರುವ ಮತ್ತು ಈ ಅಧಿನಿಯಮದಲ್ಲಿ ಪರಿಭಾಷಿಸಿರದ, ಆದರೆ ಆದಾಯ ತೆರಿಗೆ ಅಧಿನಿಯಮ ಅಥವಾ ಕಂಪನಿಗಳ (ಲಾಭಗಳ) ಅತಿಕರ ಅಧಿನಿಯಮ ಇವುಗಳಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಸದರಿ ಅಧಿನಿಯಮಗಳಲ್ಲಿ ಅನುಕ್ರಮವಾಗಿ ಅವುಗಳಿಗೆ ಗೊತ್ತುಪಡಿಸಿರುವ ಅರ್ಥಗಳನ್ನೇ ಹೊಂದಿರತಕ್ಕುದು.

**22. ತೆರಿಗೆಗಳು, ಫೀಜು ಮತ್ತು ಇತರೆ ವೆಚ್ಚಗಳನ್ನು ಸಂದಾಯ ಮಾಡದಿರುವುದು:-** ಸಂದೇಹಗಳ ನಿವಾರಣೆಗಾಗಿ, ಯಾವುದೇ ತೆರಿಗೆಗಳು, ಸುಂಕಗಳು, ಫೀಜು ಅಥವಾ (ನೋಂದಣಿ ವೆಚ್ಚಗಳು ಸೇರಿ) ಯಾವುದೇ ಸ್ವರೂಪದ ಇತರೆ ವೆಚ್ಚಗಳನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಷೇರುಗಳ ಯಾವುದೇ ವರ್ಗಾವಣೆಯ ಅಥವಾ ಯಾವುದೇ ಉದ್ಯಮಗಳ ವರ್ಗಾವಣೆಯ ಅಥವಾ ಯಾವುದೇ ಸ್ಥಿರ ಸ್ವತ್ತಿನ ವರ್ಗಾವಣೆಯ ಸಂಬಂಧದಲ್ಲಿ ಸಂದಾಯ ಮಾಡತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ- VI

### ಸಂಕೀರ್ಣ

**23. ಕರಾರುಗಳು ಮುಂತಾದವುಗಳ ಉಳಿಸುವಿಕೆ:-** (1) ಯಾವ ಕರಾರುಗಳಿಗೆ, ವಿಲೇಖಗಳಿಗೆ, ಬಂಧಪತ್ರಗಳಿಗೆ, ಒಪ್ಪಂದಗಳಿಗೆ ಮತ್ತು ಯಾವುದೇ ಸ್ವರೂಪದ ಇತರೆ ಲಿಖಿತಗಳಿಗೆ ವಿಸರ್ಜಿತ ಕಂಪನಿಯು ಒಂದು ಪಕ್ಷ ವಾಗಿದೆಯೋ ಮತ್ತು ಯಾವುವು ಗೊತ್ತುಪಡಿಸಲಾದ ದಿನದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿವೆಯೋ ಅಥವಾ ಪರಿಣಾಮಕಾರಿಯಾಗಿವೆಯೋ ಆ ಎಲ್ಲ ಕರಾರುಗಳು, ವಿಲೇಖಗಳು, ಬಂಧ ಪತ್ರಗಳು, ಒಪ್ಪಂದಗಳು ಮತ್ತು ಇತರ ಲಿಖಿತಗಳು ಆ ದಿನದಿಂದ ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಯ ಅಥವಾ ಇತರೆ ವರ್ಗಾವಣೆ ಧಾರಕ ಕಂಪನಿಯ ವಿರುದ್ಧ ಅಥವಾ ಅದರ ಪರವಾಗಿ ಪೂರ್ಣವಾಗಿ ಜಾರಿಗೆ ಬರತಕ್ಕುದು ಮತ್ತು ಪರಿಣಾಮಕಾರಿಯಾಗತಕ್ಕುದು ಮತ್ತು ವಿಸರ್ಜಿತ ಕಂಪನಿಗೆ ಬದಲಾಗಿ ಇಂಟೆಗ್ರಲ್ ಕಂಪನಿಯು ಅಥವಾ ಇತರ ವರ್ಗಾವಣೆ ಧಾರಕ ಕಂಪನಿಯು ಅವುಗಳಿಗೆ ಪಕ್ಷಕಾರವಾಗಿದ್ದಿದ್ದರೆ ಹೇಗೋ ಅಷ್ಟೇ ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಅವುಗಳನ್ನು ಜಾರಿಗೊಳಿಸಬಹುದು.

(2) ಯಾವ ಕರಾರುಗಳಿಗೆ, ವಿಲೇಖಗಳಿಗೆ, ಬಂಧಪತ್ರಗಳಿಗೆ, ಒಪ್ಪಂದಗಳಿಗೆ ಮತ್ತು ಯಾವುದೇ ಸ್ವರೂಪದ ಇತರೆ ಲಿಖಿತಗಳಿಗೆ ವರ್ಗಾಯಿತ ಘಟಕಕ್ಕೆ ಸಂಬಂಧಿಸಿದ ಕಂಪನಿಯು ಒಂದು ಪಕ್ಷವಾಗಿದೆಯೋ ಮತ್ತು ವರ್ಗಾಯಿತ ಘಟಕದ ಉದ್ಯಮಗಳಿಗೆ ಸಂಬಂಧಿಸಿದ ವಿಷಯಗಳಿಗೆ ಅದು ಸಂಬಂಧಿಸಿದ್ದರೆ ಮತ್ತು ಸಂಬಂಧಪಡುವಷ್ಟರ ಮಟ್ಟಿಗೆ ಯಾವುವು ಗೊತ್ತುಪಡಿಸಲಾದ ದಿನದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿವೆಯೋ ಅಥವಾ ಪರಿಣಾಮವನ್ನು ಹೊಂದಿವೆಯೋ ಆ ಎಲ್ಲ ಕರಾರುಗಳು, ವಿಲೇಖಗಳು, ಬಂಧಪತ್ರಗಳು, ಒಪ್ಪಂದಗಳು ಮತ್ತು ಇತರ ಲಿಖಿತಗಳು ಆ ದಿನದಿಂದ ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಯ ಅಥವಾ ಇತರೆ ವರ್ಗಾವಣೆ ಧಾರಕ ಕಂಪನಿಯ ವಿರುದ್ಧ ಅಥವಾ ಅದರ ಪರವಾಗಿ ಪೂರ್ಣ ಜಾರಿಗೆ ಬರತಕ್ಕುದು ಮತ್ತು ಪೂರ್ಣವಾಗಿ ಪರಿಣಾಮಕಾರಿಯಾಗತಕ್ಕುದು ಮತ್ತು ಅಂಥ ಕಂಪನಿಗೆ ಬದಲಾಗಿ ಇಂಟೆಗ್ರಲ್ ಕಂಪನಿಯು ಅಥವಾ ಇತರ ವರ್ಗಾವಣೆ ಧಾರಕ ಕಂಪನಿಯು ಅವುಗಳಿಗೆ ಒಂದು ಪಕ್ಷವಾಗಿದ್ದಿದ್ದರೆ ಹೇಗೋ ಅಷ್ಟುಮಟ್ಟಿಗೆ ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಅವುಗಳನ್ನು ಜಾರಿಗೊಳಿಸಬಹುದು.

24. **ಕಾನೂನು ವ್ಯವಹರಣೆಗಳ ಉಳಿಸುವಿಕೆ:–** ಗೊತ್ತುಪಡಿಸಲಾದ ದಿನದಂದು ವಿಸರ್ಜಿತ ಕಂಪನಿಯು ಹೂಡಿರುವ ಅಥವಾ ಅದರ ವಿರುದ್ಧ ಹೂಡಲಾಗಿರುವ ಯಾವುದೇ ದಾವೆಯು, ಮಧ್ಯಸ್ಥಿಕೆಯು, ಅಪೀಲು ಅಥವಾ ಯಾವುದೇ ಸ್ವರೂಪದ ಇತರೆ ಕಾನೂನು ವ್ಯವಹರಣೆಯು ಇತ್ಯರ್ಥದಲ್ಲಿದ್ದರೆ, ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಗೆ ಅಥವಾ ಯಾವುದೇ ಇತರ ವರ್ಗಾವಣೆ ಧಾರಕ ಕಂಪನಿಗೆ, ವಿಸರ್ಜಿತ ಕಂಪನಿಯ ಉದ್ಯಮಗಳು ಈ ಅಧಿನಿಯಮದ ಉಪಬಂಧಗಳ ಮೇರೆಗೆ ವರ್ಗಾವಣೆಯಾದ ಕಾರಣದಿಂದ ಅಥವಾ ಈ ಅಧಿನಿಯಮದಲ್ಲಿ ಅಡಕವಾದ ಯಾವುದೇ ವಿಷಯದ ಕಾರಣದಿಂದಾಗಿ ಅದನ್ನು ಕೊನೆಗೊಳಿಸತಕ್ಕುದಲ್ಲ, ಮುಂದುವರಿಸದೆ ಇರತಕ್ಕುದಲ್ಲ ಅಥವಾ ಯಾವುದೇ ರೀತಿಯಲ್ಲಿ ಅದರ ಮೇಲೆ ಪ್ರತಿಕೂಲ ಪರಿಣಾಮವನ್ನುಂಟುಮಾಡತಕ್ಕುದಲ್ಲ, ಆದರೆ ಆ ದಾವೆಯನ್ನು, ಮಧ್ಯಸ್ಥಿಕೆಯನ್ನು, ಅಪೀಲನ್ನು ಅಥವಾ ಇತರ ವ್ಯವಹರಣೆಯನ್ನು ಸಂದರ್ಭಾನುಸಾರ ಇಂಟೆಗ್ರಲ್ ಕಂಪನಿಯು ಅಥವಾ ಇತರೆ ವರ್ಗಾವಣೆ ಧಾರಕ ಕಂಪನಿಯು ಅಥವಾ ಅದರ ವಿರುದ್ಧ ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ ವಿಸರ್ಜಿತ ಕಂಪನಿಯು ಅಥವಾ ಅದರ ವಿರುದ್ಧ ಅದನ್ನು ಮುಂದುವರಿಸಬಹುದಾದಂಥದೇ, ಕ್ರಮ ಜರುಗಿಸಬಹುದಾದಂಥದೇ ಮತ್ತು ಜಾರಿಗೊಳಿಸಬಹುದಾದಂಥದೇ ರೀತಿಯಲ್ಲಿ ಮತ್ತು ಅಷ್ಟುಮಟ್ಟಿಗೆ ಅದನ್ನು ಮುಂದುವರಿಸಬಹುದು, ಆ ಬಗ್ಗೆ ಕ್ರಮ ಜರುಗಿಸಬಹುದು ಮತ್ತು ಅದನ್ನು ಜಾರಿಗೊಳಿಸಬಹುದು.

25. **ತೊಂದರೆಗಳ ನಿವಾರಣಾ ಅಧಿಕಾರ:–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ತೊಂದರೆಯ ನಿವಾರಣೆಗಾಗಿ ತನಗೆ ಅವಶ್ಯವೆಂದು ಕಂಡುಬರುವಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಆದೇಶವನ್ನು, ಗೊತ್ತುಪಡಿಸಲಾದ ದಿನದಿಂದ ಮೂರು ವರ್ಷಗಳ ಅವಧಿ ಕೊನೆಗೊಂಡ ತರುವಾಯ ಮಾಡತಕ್ಕುದಲ್ಲ.

26. **ಇತರ ಕಾನೂನುಗಳ ಉಪಬಂಧಗಳನ್ನು ಈ ಅಧಿನಿಯಮವು ಅಧ್ಯಾರೋಹಿಸುವುದು:–** ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶದ ಉಪಬಂಧಗಳು, ಕಂಪನಿಗಳ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ವ್ಯಕ್ತ ಅಥವಾ ಇಂಗಿತ ಕರಾರಿನಲ್ಲಿ ಅಥವಾ ಈ ಅಧಿನಿಯಮವಲ್ಲದ ಯಾವುದೇ ಇತರ ಕಾನೂನಿನ ಕಾರಣದಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ನಿಯಮಗಳಲ್ಲಿ ಅಥವಾ ವಿನಿಯಮಗಳಲ್ಲಿ ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕುದು.

27. **ಸಂಘದ ವಿವರಣ ಪತ್ರ ಮತ್ತು ನಿಯಮಾವಳಿಗಳನ್ನು ತಿದ್ದುಪಡಿ ಮಾಡುವ ಅಧಿಕಾರ:–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಇಂಟೆಗ್ರಲ್ ಕಂಪನಿಯ ಅಥವಾ ಇತರೆ ವರ್ಗಾವಣೆ ಧಾರಕ ಕಂಪನಿಯ ವಿವರಣ ಪತ್ರದಲ್ಲಿ ಅಥವಾ ನಿಯಮಾವಳಿಗಳಲ್ಲಿ ಅಥವಾ ಎರಡರಲ್ಲಿಯೂ ತಿದ್ದುಪಡಿಗಳನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಅನುಸಾರ ಇಂಟೆಗ್ರಲ್ ಕಂಪನಿಯ ಅಥವಾ ಇತರೆ ವರ್ಗಾವಣೆ ಧಾರಕ ಕಂಪನಿಯ ಸಂಘದ ವಿವರಣ ಪತ್ರದಲ್ಲಿ ಅಥವಾ ನಿಯಮಾವಳಿಗಳಲ್ಲಿ ಮಾಡಿದ ಯಾವುದೇ ತಿದ್ದುಪಡಿಗಳು ಕಂಪನಿಗಳ ಅಧಿನಿಯಮದಲ್ಲಿ ಏನೇ ಇದ್ದರೂ ಪರಿಣಾಮಕಾರಿಯಾಗತಕ್ಕುದು.

## ಮೊದಲನೆಯ ಅನುಸೂಚಿ

## [2(1) (ಡಿ) ಮತ್ತು 4ನೇ ಪ್ರಕರಣಗಳನ್ನು ನೋಡಿ]

1. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಮಧ್ಯಪ್ರದೇಶ ರಾಜ್ಯದ ಭಿಲಾಯಿಯಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಭಿಲಾಯಿ ಇಸ್ಪಾಟ್ ಲಿಮಿಟೆಡ್.

2. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಬಿಹಾರ ರಾಜ್ಯದ ಬೊಕಾರೋ ಸ್ಟೀಲ್ ಸಿಟಿಯಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಬೊಕಾರೋ ಸ್ಟೀಲ್ ಲಿಮಿಟೆಡ್.

3. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಪಶ್ಚಿಮ ಬಂಗಾಳ ರಾಜ್ಯದ ದುರ್ಗಾಪುರದಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ದುರ್ಗಾಪುರ ಮಿಶ್ರಾ ಇಸ್ಪಾಟ್ ಲಿಮಿಟೆಡ್.

4. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಬಿಹಾರ ರಾಜ್ಯದ ರಾಂಚಿಯಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್.

5. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಒರಿಸ್ಸಾ ರಾಜ್ಯದ ರೂರ್ಕೆಲಾದಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ರೂರ್ಕೆಲಾ ಇಸ್ಪಾಟ್ ಲಿಮಿಟೆಡ್.

6. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಪಶ್ಚಿಮ ಬಂಗಾಳ ರಾಜ್ಯದ ಕಲ್ಕತ್ತಾದಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಎಸ್‌ಎಐಎಲ್ ಇಂಟರ್ ನ್ಯಾಷನಲ್ ಲಿಮಿಟೆಡ್.

7. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ತಮಿಳುನಾಡು ರಾಜ್ಯದ ಸೇಲಂನಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಸೇಲಂ ಸ್ಟೀಲ್ ಲಿಮಿಟೆಡ್.

## ಎರಡನೆಯ ಅನುಸೂಚಿ

## (9ನೇ ಪ್ರಕರಣವನ್ನು ನೋಡಿ)

1. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಬಿಹಾರ್ ರಾಜ್ಯದ ರಾಂಚಿಯಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಮೆಟಲರ್ಜಿಕಲ್ ಅಂಡ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ (ಇಂಡಿಯಾ) ಲಿಮಿಟೆಡ್.

2. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಪಶ್ಚಿಮ ಬಂಗಾಳ ರಾಜ್ಯದ ಕಲ್ಕತ್ತಾದಲ್ಲಿ ಅದರ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಹಿಂದೂಸ್ಥಾನ್ ಸ್ಟೀಲ್ ವರ್ಕ್ಸ್ ಕನ್‌ಸ್ಟ್ರಕ್ಷನ್ ಲಿಮಿಟೆಡ್.

3. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಆಂಧ್ರ ಪ್ರದೇಶ ರಾಜ್ಯದ ಹೈದರಾಬಾದ್‌ನಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ನ್ಯಾಶನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.

4. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಮಹಾರಾಷ್ಟ್ರ ರಾಜ್ಯದ ನಾಗಪುರದಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಮ್ಯಾಂಗನೀಸ್ ಓರ್ (ಇಂಡಿಯಾ) ಲಿಮಿಟೆಡ್.

5. ಕಂಪನಿಗಳ ಅಧಿನಿಯಮದ ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ, ಗೋವಾ, ದಮನ್ ಮತ್ತು ದೀವ್ ಒಕ್ಕೂಟ ರಾಜ್ಯಕ್ಷೇತ್ರದ ಮಡಗಾವ್ ಬಂದರಿನಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಒಂದು ಕಂಪನಿಯಾದ ಮಾಂಡೋವಿ ಪೆಲ್ಲೆಟ್ಸ್ ಲಿಮಿಟೆಡ್.

* * * * * * * * * * *

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು - ಕಾ.ಸೂ.ಪಿ. 676 / ಎಲ್‌ಎ-ಪಿ11